ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಂಕೋಲಾ
OS ನಂಬರ. 30/2019

ಪಿ ಡಬ್ಲ್ಯೂ-3

ದಿಃ 13-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| ಸಾಕ್ಷಿಯ ಹೆಸರುಃ | ಶಬ್ಬೀರ ಅಹಮ್ಮದ್ |
| ತಂದಯ ಹೆಸರುಃ | ಅಬ್ದುಲ ರಜಾಖ್ ಖಾನ್ |
| ವಯಸ್ಸುಃ | 50 ವರ್ಷ |
| ಉದ್ಯೋಗಃ | ಅಂಗಡಿ ವ್ಯಾಪಾರ |
| ವಿಳಾಸಃ | ಅಂಕೋಲಾ ಬಾಜಾರ. |

ಮುಖ್ಯ ವಿಚಾರಣೆಃ ವಾದಿ ಪರ ವಕೀಲರಾದ ಶ್ರೀ ಎಸ್.ಯು.ಎ ಇವರಿಂದಃ

ಈ ಪ್ರಕರಣದಲ್ಲಿ ನ್ಯಾಯಾಲಯದಿಂದ ನನಗೆ ಸಮನ್ಸ ಜಾರಿಯಾಗಿತ್ತು. ಬಾಡಿಗೆ ಬಗ್ಗೆ ಸಾಕ್ಷಿ ನುಡಿಯಲು ಬಂದಿರುತ್ತೇನೆ. ನಾನು ಬಾಡಿಗೆಯಲ್ಲಿ ಇರುವ ಅಂಗಡಿಯು 1ನೇ ಪ್ರತಿವಾದಿಗೆ ಸೇರಿರುತ್ತದೆ. ನಾನು ಬಾಡಿಗೆ ಇರುವ ಅಂಗಡಿಯು ಅಂಕೋಲಾ ಬಾಜಾರ್ ನಲ್ಲಿ ಇರುತ್ತದೆ. ನಾನು ಬಾಡಿಗೆ ಇರುವ ಅಂಗಡಿಯ ಉದ್ದ ಅಗಲ 10/14 ಇರಬಹುದು. ನಾನು ಪಾತ್ರೆ ವ್ಯಾಪಾರ ಮಾಡುತ್ತೇನೆ. ನಾನು ಅಂಗಡಿ ವ್ಯಾಪಾರ ಮಾಡಲು ಮುನ್ಸಿಪಾಲಿಟಿಯಿಂದ ಪರವಾಣಿಗೆ ಪಡೆದುಕೊಂಡಿರುತ್ತೇನೆ. ಯಾವ ದಾಖಲೆಯನ್ನು ಕೊಟ್ಟು ಪರವಾಣಿಗೆ ತೆಗೆದುಕೊಂಡಿರುತ್ತೀರಿ ಎಂದರೆ ಸಾಕ್ಷಿಯು ಬಾಂಡ್ ಪೇಪರ್ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಸಾಕ್ಷಿಯು ನಿಪಿ-38 ನೇದ್ದನ್ನು ನೋಡಿ

ಗುರುತಿಸುತ್ತಾರೆ. ಫೀಜನ್ನು ತುಂಬಿದ್ದರ ಬಗ್ಗೆ ರಶೀದಿ ಕೊಟ್ಟಿರುತ್ತಾರೆ. ಪರವಾಣಿಗೆ ಕೊಟ್ಟಿರುವುದಿಲ್ಲ. ನಿಪಿ-38 ವಕೀಲರು ಬರೆದುಕೊಟ್ಟಿರುತ್ತಾರೆ. ಯಾವ ವಕೀಲರು ಬರೆದುಕೊಟ್ಟಿರುತ್ತಾರೆ ಎಂದು ಗೊತ್ತಿರುವುದಿಲ್ಲ. ನಿಪಿ-38 ರ ಕರಾರು ಪತ್ರದ ಮೂಲ ಪ್ರತಿ 3ನೇ ಪ್ರತಿವಾದಿಯ ಹತ್ತಿರ ಇರುತ್ತದೆ. ನಾನು ಬಾಡಿಗೆ ಹಣವನ್ನು ಚೆಕ್ ಮುಖಾಂತರ 1ನೇ ಪ್ರತಿವಾದಿಗೆ ಕೊಟ್ಟಿರುತ್ತೇನೆ. ನಾನು ಪ್ರತಿದಿನ ಬಾಡಿಗೆ ಕೊಡುತ್ತೇನೆ. ಪ್ರತಿದಿನ ರೂ.800/- ಬಾಡಿಗೆ ಕೊಡುತ್ತೇನೆ. ಅದನ್ನು 3ನೇ ಪ್ರತಿವಾದಿಗೆ ಕೊಡುತ್ತೇನೆ. ಈ ಮೊದಲು ದಿನಕ್ಕೆ 200/- ಬಾಡಿಗೆ ಇದ್ದು, ಈಗ ಹೊಸ ಕರಾರಿನ ಪ್ರಕಾರ ರೂ.800/- ಬಾಡಿಗೆ ಇರುತ್ತದೆ ಎಂದು ನುಡಿಯುತ್ತಾರೆ. ರೂ.800/- ಬಾಡಿಗೆಯನ್ನು 2023 ರಿಂದ ಕೊಡುತ್ತಿದ್ದೇನೆ. 2023ರ ಪೂರ್ವದಲ್ಲಿ ಮಾಡಿಕೊಂಡ ಕರಾರು ಪತ್ರದ ಮೂಲ ಪ್ರತಿ 3ನೇ ಪ್ರತಿವಾದಿಯ ಹತ್ತಿರ ಇರುತ್ತದೆ ಎಂದು ನುಡಿಯುತ್ತಾರೆ. ದಿಃ03-06-2024 ರ ಕರಾರು ಪತ್ರದಲ್ಲಿ ಅಂಗಡಿಯನ್ನು ಖುಲ್ಲಾಪಡಿಸಿ ಕೊಡಬೇಕು ಎಂದು ಶರತ್ತು ಇರುತ್ತದೆ ಎಂದರೆ ಸಾಕ್ಷಿಯು ನಮಗೆ ಒಪ್ಪಿಗೆ ಇಲ್ಲ ಎಂದರೆ ಖುಲ್ಲಾ ಮಾಡಿಕೊಡಬಹುದು ಎಂದು ನಮೂದು ಇದೆ ಎಂದು ನುಡಿಯುತ್ತಾರೆ. ದಿಃ03-06-2024ರ ನಂತರ ಮತ್ತೆ ಯಾವುದಾದರೂ ಕರಾರು ಆಗಿದೆಯಾ ಎಂದರೆ ಆಗಿರುತ್ತದೆ ಎಂದು ನುಡಿಯುತ್ತಾರೆ. ಅದು 3ನೇ ಪ್ರತಿವಾದಿಯ ಹತ್ತಿರ ಇರುತ್ತದೆ. 8ನೇ ಪ್ರತಿವಾದಿಯ ಅಂಗಡಿಯು ನಾನು ಇರುವ ಬಾಡಿಗೆ ಅಂಗಡಿಯ ಮೇಲೆ ಇರುತ್ತದೆ. 2023ರ ನಂತರ ರೂ.1200/- ಬಾಡಿಗೆ ಹಣ ಕೊಡುತ್ತಿದ್ದೀರಿ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಿಮಗೆ ನ್ಯಾಯಾಲಯದಿಂದ

ದಾವೆ ಸಮನ್ಸ ಜಾರಿಯಾದಾಗ ನ್ಯಾಯಾಲಯಕ್ಕೆ ಹಾಜರಾಗಿ ಪ್ರತಿವಾದ ಪತ್ರವನ್ನು ಸಲ್ಲಿಸಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ನನ್ನ ಪತ್ನಿಗೆ ಹುಷಾರು ಇರಲಿಲ್ಲ ಎಂದು ನುಡಿಯುತ್ತಾರೆ. ನ್ಯಾಯಾಲಯದಿಂದ ಬಂದ ಸಮನ್ಸ ಬಗ್ಗೆ 3 ಮತ್ತು 6ನೇ ಪ್ರತಿವಾದಿಯರ ಹತ್ತಿರ ಮಾತನಾಡಿರುತ್ತೀರಾ ಎಂದರೆ ಹೌದು ಎಂದು ನುಡಿಯುತ್ತಾರೆ. ವಾದಿಗೂ ಸಹ ಹೇಳಿರುತ್ತೇನೆ ಎಂದು ನುಡಿಯುತ್ತಾರೆ.

(ಈ ಹಂತದಲ್ಲಿ ವಾದಿ ಪರ ವಕೀಲರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟಿ ಸವಾಲಿಗೆ ಅನುಮತಿ ಕೋರಿದ್ದು, ಅನುಮತಿಸಲಾಯಿತು.)

ಪಾಟೀ ಸವಾಲುಃ ವಾದಿ ಪರ ವಕೀರಾದ ಶ್ರೀ ಎಸ್.ಯು.ಎ ಇವರಿಂದಃ

2. ನೀವು ವಾದಿಗೆ ಹೇಳಿರುವುದಿಲ್ಲ ಎಂದರೆ ಸಾಕ್ಷಿಯು ವಾದಿಗೂ ಹಾಗೂ ಮೇಲೆ ಇರುವ ಬಾಡಿಗೆದಾರರಿಗೆ ಹೇಳಿರುತ್ತೇನೆ ಎಂದು ನುಡಿಯುತ್ತಾರೆ. ವಾದಿಯು ಪ್ರತಿದಿನ ಬರುತ್ತಾರೆ ಎಂದು ನುಡಿಯುತ್ತಾರೆ. 8ನೇ ಪ್ರತಿವಾದಿಯು ನನ್ನ ಹೆಂಡತಿಯ ತಮ್ಮ. ಅಂಗಡಿಯ ಬಾಡಿಗೆಯ ಯಾವುದೆ ಕರಾರು ಪತ್ರಗಳಲ್ಲಿ ವಾದಿಯ ಸಹಿ ಇರುತ್ತದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನೀವು ಎಂದಿಗಾದರೂ ವಾದಿಗೆ ಒಂದು ಪೈಸೆನಾದರೂ ಕೊಟ್ಟಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಅಂಗಡಿಯ ವ್ಯವಹಾರವು 3 ಮತ್ತು 6ನೇ ಪ್ರತಿವಾದಿಯು ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು 4 ಅಂಗಡಿಗಳು ಇದ್ದು, ಮೇಲೆ ಇರುವ ಅಂಗಡಿಯ ಬಾಡಿಗೆ 6ನೇ

ಪ್ರತಿವಾದಿಗೆ, ಕೆಳಗಡೆ ಇರುವ ಅಂಗಡಿಯ ಬಾಡಿಗೆ 3ನೇ ಪ್ರತಿವಾದಿಗೆ, ಹಿಂಬದಿಯಲ್ಲಿರುವ 2 ಅಂಗಡಿಗಳ ಬಾಡಿಗೆಯನ್ನು ವಾದಿಗೆ ಕೊಡುತ್ತಿದ್ದೇನೆ ಎಂದು ನುಡಿಯುತ್ತಾರೆ. ಮೇಲೆ ಹಾಗೂ ಕೆಳಗಡೆ ಇರುವ ಅಂಗಡಿಯು ರಸ್ತೆಯ ಮುಂಬದಿಗೆ ಇರುವುದರಿಂದ ಬಹಳಷ್ಟು ಜನರು ಬರುತ್ತಾರೆ ಎಂದರೆ ಸರಿ. ಎಷ್ಟನೇ ಸಾಲಿನಿಂದ ನೀವು ಅಂಗಡಿ ನಡೆಸುತ್ತಿದ್ದೀರಿ ಎಂದರೆ ಸಾಕ್ಷಿಯು ಈ ಮೊದಲು ನನ್ನ ಭಾವನ ಹೆಸರಿನಲ್ಲಿ ಕರಾರು ಆಗಿದ್ದು, ಆದರೆ ನಾನೇ ನಡೆಸುತ್ತಿದ್ದೆ ಎಂದು ನುಡಿಯುತ್ತಾರೆ. 10-11 ವರ್ಷಗಳಿಂದ ನಾನೇ ನಡೆಸಿಕೊಂಡು ಬರುತ್ತಿದ್ದೇನೆ. ಮೊದಲಿನ ಕರಾರು ಪತ್ರ ಯಾರ ಹತ್ತಿರ ಇರುತ್ತದೆ ಎಂದರೆ ಸಾಕ್ಷಿಯು 3ನೇ ಪ್ರತಿವಾದಿಯ ಹತ್ತಿರ ಇರುತ್ತದೆ ಎಂದು ನುಡಿಯುತ್ತಾರೆ. 2015 ರಿಂದ ನೀವು ಪ್ರತಿದಿನ ರೂ.800/- ಬಾಡಿಗೆ 3ನೇ ಪ್ರತಿವಾದಿಗೆ ಕೊಡುತ್ತಿದ್ದೀರಿ ಎಂದರೆ ಸಾಕ್ಷಿಯು ಅವರ ತಾಯಿಗೆ ಹುಷಾರು ಇಲ್ಲದ ಕಾರಣ 3ನೇ ಪ್ರತಿವಾದಿಗೆ ಕೊಡುತ್ತಿದ್ದೆ ಎಂದು ನುಡಿಯುತ್ತಾರೆ. 2024 ರಿಂದ ನೀವು ರೂ.1200/- ಬಾಡಿಗೆ ಕೊಡುತ್ತಿದ್ದೀರಿ ಎಂದರೆ ಸರಿಯಲ್ಲ. 2024 ರ ಕರಾರು ಪತ್ರದ ಪ್ರತಿ ನಿಮ್ಮ ಹತ್ತಿರ ಇದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ.

<u>ಪಾಟೀ ಸವಾಲುಃ</u> ಪ್ರತಿವಾದಿ ಪರ ವಕೀಲರಾದ ಶ್ರೀ ಎಸ್. ಓ. ಎನ್ ಇವರಿಂದಃ

ವಾದಿಯು ಈಗಲೂ ಪ್ರತಿದಿನ ಬರುತ್ತಾರಾ ಎಂದರೆ ಸಾಕ್ಷಿಯು ಪಿಗ್ಮಿ ತೆಗೆದುಕೊಳ್ಳಲು ಪ್ರತಿದಿನ ಬರುತ್ತಾರೆ ಎಂದು ನುಡಿಯುತ್ತಾರೆ. ಅವರು ಯಾವ ಕಾರಣಕ್ಕೆ ಪಿಗ್ಮಿ ತೆಗೆದುಕೊಳ್ಳಲು ಬರುತ್ತಾರೆ ಎಂದರೆ ಸಾಕ್ಷಿಯು ವೈಯಕ್ತಿಕವಾಗಿ ಪಿಗ್ಮಿಗೆ ಬರುತ್ತಾರೆ

ಎಂದು ನುಡಿಯುತ್ತಾರೆ. ಎಷ್ಟು ವರ್ಷಗಳಿಂದ ಪಿಗ್ಮಿ ತೆಗೆದುಕೊಳ್ಳುತ್ತಿದ್ದಾರೆ ಎಂದರೆ ಸಾಕ್ಷಿಯು 8–10 ವರ್ಷಗಳಿಂದ ಎಂದು ನುಡಿಯುತ್ತಾರೆ. ಬಾಡಿಗೆ ಹಣವನ್ನು ಯಾರು ತೆಗೆದುಕೊಳ್ಳುತ್ತಿದ್ದಾರೆ ಎಂದರೆ ಸಾಕ್ಷಿಯು 3ನೇ ಪ್ರತಿವಾದಿಗೆ ಕೊಡುತ್ತಿದ್ದೇನೆ ಎಂದು ನುಡಿಯುತ್ತಾರೆ. ಅವರಿಗೆ ಎಷ್ಟು ವರ್ಷಗಳಿಂದ ಕೊಡುತ್ತಿದ್ದೀರಿ ಎಂದರೆ ಸಾಕ್ಷಿಯು 5–6 ವರ್ಷಗಳಿಂದ ಕೊಡುತ್ತಿದ್ದೇನೆ ಎಂದು ನುಡಿಯುತ್ತಾರೆ. ನೀವೇನಾದರೂ ಮನೆಗೆ ಹೋಗಿ ಬಾಡಿಗೆ ಹಣ ಕೊಡುತ್ತಿದ್ದೀರಾ ಎಂದರೆ ಸಾಕ್ಷಿಯು ಒಂದೊಂದು ಸಲ ಹೋಗುತ್ತಿದ್ದೇನೆ ಎಂದು ನುಡಿಯುತ್ತಾರೆ. ನೀವು ಪ್ರತಿದಿನ ಬಾಡಿಗೆ ಕೊಡುವುದಿಲ್ಲ, ಬದಲಾಗಿ ತಿಂಗಳನಾತೆಯಿಂದ ಕೊಡುತ್ತೀರಿ ಎಂದರೆ ಸಾಕ್ಷಿಯ ಪ್ರತಿದಿನ ರೂ.800/– ರಂತೆ 3ನೇ ಪ್ರತಿವಾದಿಗೆ ಕೊಡುತ್ತೇನೆ ಎಂದು ನುಡಿಯುತ್ತಾರೆ. ಕರಾರು ಪತ್ರ ಯಾರ ಮಧ್ಯ ಆಗಿರುತ್ತದೆ ಎಂದರೆ ಸಾಕ್ಷಿಯು 1, 3ನೇ ಪ್ರತಿವಾದಿ ಹಾಗೂ ನನ್ನ ಹೆಂಡತಿಯ ತಮ್ಮನ ಮಧ್ಯ ಆಗಿರುತ್ತದೆ ಎಂದು ನುಡಿಯುತ್ತಾರೆ. ಆ ಸಂದರ್ಭದಲ್ಲಿ ವಾದಿ ಏನಾದರೂ ಹಾಜರು ಇದ್ದರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನೀವು ಇರುವ ಬಾಡಿಗೆ ಅಂಗಡಿಯು ಕುಟುಂಬದ ಆಸ್ತಿ ಎಂದು ಕಲ್ಪನೆ ಇತ್ತಾ ಎಂದರೆ ಹೌದು ಎಂದು ನುಡಿಯುತ್ತಾರೆ. ಈ ಪ್ರಕರಣ ದಾಖಲಿಸಿದ ನಂತರ ವಾದಿಯು ಇದು ಕುಟುಂಬದ ಆಸ್ತಿಯಾಗಿದ್ದು, ನೀವು ಅಂಗಡಿಯಿಂದ ಬಿಟ್ಟು ಹೋಗಬೇಕು ಎಂದು ತೊಂದರೆ ಏನಾದರೂ ಕೊಟ್ಟಿದ್ದರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನೀವು ವಾದಿಗೆ ಹೆದರಿಕೊಂಡು 1ನೇ ಪ್ರತಿವಾದಿಯ ಹತ್ತಿರ ಬಾಡಿಗೆ ಹಣವನ್ನು ಕೊಡುತ್ತಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕರಾರು ಪತ್ರವನ್ನು ನೀವು ಹಾಗೂ ವಾದಿಯು

ಸೇರಿಕೊಂಡು ಸೃಷ್ಟಿ ಮಾಡಿಕೊಂಡಿದ್ದು ಎಂದರೆ ಸರಿಯಲ್ಲ. ನೀವು ವಾದಿಗೆ ಸಹಕಾರ ಮಾಡಲಿಲ್ಲ ಎಂದರೆ ಅಂಗಡಿ ಬಿಟ್ಟು ಹೋಗಬೇಕಾಗುತ್ತದೆ ಎಂಬ ಭಯದಿಂದ ರೂ.800/- ಬಾಡಿಗೆ 1ನೇ ಪ್ರತಿವಾದಿಗೆ ಕೊಡುತ್ತಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ವಾದಿಯು ತಕರಾರು ಮಾಡಿರುವುದರಿಂದಿ ಮುನ್ಸಿಪಾಲಿಟಿಯಿಂ ದ ಪರವಾಣಿಗೆ ಸಿಕ್ಕಿರುವುದಿಲ್ಲ ಎಂದರೆ ಸಾಕ್ಷಿಯು ಆ ರೀತಿ ಮನ್ಸಿಪಾಲಿಟಿಯವರು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ವಾದಿಯು ನಿಮಗೆ ತೊಂದರೆ ಕೊಡುತ್ತಾರೆ ಎಂಬ ಉದ್ದೇಶದಿಂದ ಅವರ ಪರವಾಗಿ ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಬಾಡಿಗೆಗೆ ಸಂಬಂಧಪಟ್ಟಂತೆ 3ನೇ ಪ್ರತಿವಾದಿಯ ಹತ್ತಿರ ಯಾವುದೇ ಮೂಲ ಕರಾರು ಪತ್ರ ಇರುವುದಿಲ್ಲ, ಆದರೆ ನೀವು ವಾದಿಗೆ ಹೆದರಿಕೊಂಡು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

<u>ಮರುವಿಚಾರಣೆ:</u> ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ).

ಓ ಹೇ ಕೇ ಸರಿ ಇದೆ

ಸಿವಿಲ್ ನ್ಯಾಯಾಧೀಶರು, ಅಂಕೋಲಾ.